ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com

ಇ-ಮೇಲ್ ವಿಳಾಸ :director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಕವಿಪ್ರನಿನಿ/ಬಿ9/85303/18–19

ದಿನಾಂಕ : 15 SEP 2020

## ಸುತ್ತೋಲೆ

**ವಿಷಯ:–** ನಿಗಮದಲ್ಲಿ ನಿರ್ವಹಿಸುವ ಕಾಮಗಾರಿಗಳಿಗೆ ಬಳಸುವ ಉಪಖನಿಜಗಳ ರಾಜಧನವನ್ನು ಕಟಾಯಿಸಿ ನಿಗಧಿತ ಅವಧಿಯಲ್ಲಿ ಸರ್ಕಾರಕ್ಕೆ ಪಾವತಿಸುವ ಹಾಗೂ ಕಾಮಗಾರಿ ಮಾರ್ಗ ನಿರ್ಮಾಣ ಪಥದಲ್ಲಿ ದೊರೆಯುವ ಖನಿಜಕ್ಕೆ ಸಹ ರಾಜಧನ ಪಾವತಿಸುವ ಬಗ್ಗೆ.

**ಉಲ್ಲೇಖ:–**
1. ಸುತ್ತೋಲೆ ಸಂಖ್ಯೆ ಕವಿಪ್ರನಿನಿ/ಬಿ9/85303/18–19 ದಿನಾಂಕ 19/11/2018.
2. ಗಣಿ ಮತ್ತು ಭೂ ವಿಜ್ಞಾನ ಇಲಾಖೆ ರವರ ಸುತ್ತೋಲೆ ಸಂಖ್ಯೆ ಗ.ಭೂ.ಇ/ಡಿಸಿಬಿ/ಡಿಸಿಬಿ ತಃಖ್ತೆ /2019–20/4524 ದಿನಾಂಕ 22/10/2019.
3. ಗಣಿ ಮತ್ತು ಭೂ ವಿಜ್ಞಾನ ಇಲಾಖೆ ರವರ ಸುತ್ತೋಲೆ ಸಂಖ್ಯೆ ಗ.ಭೂ.ಇ/ಡಿಸಿಬಿ/ಕಗಗು/2019–20/6561 ದಿನಾಂಕ 02/01/2020.
4. ಗಣಿ ಮತ್ತು ಭೂ ವಿಜ್ಞಾನ ಇಲಾಖೆ ರವರ ಸುತ್ತೋಲೆ ಸಂಖ್ಯೆ ಗ.ಭೂ.ಇ/ಡಿಸಿಬಿ/20–21 ದಿನಾಂಕ 03/07/2020.

*******

**ಪೀಠಿಕೆ:**

ಉಲ್ಲೇಖ (1) ರ ಸುತ್ತೋಲೆಯಲ್ಲಿ ನಿಗಮದಲ್ಲಿ ನಿರ್ವಹಿಸುವ ಕಾಮಗಾರಿಗಳಿಗೆ ಬಳಸುವ ಉಪಖನಿಜಗಳ ರಾಜಧನದ ಪ್ರಮಾಣವನ್ನು ಮೆಟ್ರಿಕ್ ಟನ್ ಗಳಿಂದ ಕ್ಯೂಬಿಕ್ ಮೀಟರ್ ಗಳಿಗೆ ಪರಿವರ್ತಿಸುವ ಅನುಮೋದಿತ ಪರಿವರ್ತನಾ ಕೋಷ್ಠಕದಂತೆ, ರಾಜಧನ ಕಟಾಯಿಸಲು ಹಾಗೂ ಹಿಂದಿನ ಸಾಲಿನಲ್ಲಿ ಮೆಟ್ರಿಕ್ ಟನ್ ಗಳಿಂದ ಕ್ಯೂಬಿಕ್ ಮೀಟರ್ ಗಳಿಗೆ ಪರಿವರ್ತಿಸುವಲ್ಲಿ ವ್ಯತ್ಯಾಸ ಇದ್ದಲ್ಲಿ, ವ್ಯತ್ಯಾಸದ ಮೊತ್ತವನ್ನು ಸಹ ಪಾವತಿಸಿಕೊಳ್ಳಲು ಕ್ರಮಕೈಗೊಳ್ಳುವಂತೆ ಸೂಚಿಸಲಾಗಿತ್ತು. ಸರ್ಕಾರದ ಆದೇಶದಂತೆ, ಕಾಮಗಾರಿಗಳ ಬಿಲ್ಲುಗಳಲ್ಲಿ ಸರಿಯಾದ ರಾಜಧನ ಮೊತ್ತವನ್ನು ಕಟಾಯಿಸಬೇಕಾಗಿದ್ದು, ತಪ್ಪಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ಸಹ ತಿಳಿಸಲಾಗಿತ್ತು.

ಉಲ್ಲೇಖ (2) ರ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸುತ್ತೋಲೆಯಲ್ಲಿ, ಕಾಮಗಾರಿ ನಿರ್ವಹಿಸುವ ಗುತ್ತಿಗೆದಾರರು ಖಾಸಗಿ ಕಲ್ಲು ಗಣಿ ಗುತ್ತಿಗೆದಾರರಿಂದ ಪಡೆದಂತಹ ಉಪಖನಿಜಗಳಿಗೆ ಹಣ ಪಾವತಿ ಮಾಡಿ ಖರೀದಿಸುವುದಾಗಿಯೂ ಮತ್ತು ಸದರಿ ಕಾಮಗಾರಿ ಬಿಲ್ಲುಗಳಲ್ಲಿ ರಾಜಧನ ಕಟಾವಣೆ ಮಾಡಿರುವುದರಿಂದ ಎರಡು ಕಡೆ ರಾಜಧನ ಪಾವತಿ ಮಾಡಿದಂತಾಗುತ್ತದೆಯೆಂದು, ಕಾಮಗಾರಿ ಬಿಲ್ಲುಗಳಲ್ಲಿ ಕಟಾವು ಮಾಡಲಾದ ಮೊತ್ತವನ್ನು ಮರುಪಾವತಿ ಮಾಡುವಂತೆ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿರುತ್ತದೆ. ಉಚ್ಚ ನ್ಯಾಯಾಲಯದ ರಿಟ್ ಆದೇಶಗಳಲ್ಲಿ, ಗುತ್ತಿಗೆದಾರನ್ನು ತಾನು ನಿರ್ವಹಿಸಿದ ಕಾಮಗಾರಿಗಳಿಗೆ ಮುಂಗಡ ರಾಜಧನ ಪಾವತಿಸಿ ಪಡೆದಂತಹ ಪರವಾನಿಗೆ / ರಾಜಧನ ಪಾವತಿಸಿರುವುದಕ್ಕೆ ಪೂರಕವಾಗಿ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿದಂತಹ ಸಂದರ್ಭದಲ್ಲಿ ರಾಜಧನ ಮರುಪಾವತಿ ಮಾಡಬಹುದೆಂದು ಆದೇಶಿಸಲಾಗಿರುತ್ತದೆ.

| | |
|---|---|
| EE (IT) | |
| EE (IT)-1 | |
| EE (IT) (NW&DC) | |
| EE (MIS) | |
| DCA (IT) | |

SEE (IT & MIS)
KPTCL

ಆದರೆ, ಕಾಮಗಾರಿಗಳಲ್ಲಿ ಗುತ್ತಿಗೆದಾರರು ಪರವಾನಿಗೆಯೊಂದಿಗೆ ಪಡೆದ ಖನಿಜದ ಜೊತೆಗೆ ಹೆಚ್ಚುವರಿಯಾಗಿ ಅನಧಿಕೃತವಾಗಿ ಪಡೆಯುತ್ತಿರುವ ಕಲ್ಲುಗಣಿಗಳಿಂದ ಪಡೆದ ಉಪಖನಿಜಗಳನ್ನು ಖರೀದಿಸಿ ಉಪಯೋಗಿಸುತ್ತಿದ್ದು, ಇದಕ್ಕೆ ಸಂಬಂಧಪಟ್ಟ ರಾಜಧನದ ಮೊತ್ತ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆಯಾಗುತ್ತಿದ್ದರೂ ಸಹ, ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು 1994 (ಕೆಎಂಎಂಸಿಆರ್) ಪ್ರಕಾರ, ಖನಿಜ ರವಾನೆ ಪರವಾನಿಗೆಗಳನ್ನು (Mineral Dispatch Permit, MDP) ಪಡೆಯದೆ ಅನಧಿಕೃತವಾಗಿ ನಡೆದ ಗಣಿಗಾರಿಕೆಯಿಂದ ಉಪಖನಿಜಕ್ಕೆ ರಾಜಧನದ 5 ಪಟ್ಟು ದಂಡರೂಪದಲ್ಲಿ ವಸೂಲಿಯಾಗದೆ, ಸರ್ಕಾರದ ಬೊಕಸಕ್ಕೆ ರಾಜಧನ ನಷ್ಟವಾಗಿರುವ ಬಗ್ಗೆ ಲೆಕ್ಕ ಪರಿಶೋಧನಾ ಇಲಾಖೆ ಕೈಗೊಂಡ Performance Audit ರಲ್ಲಿ ಆಕ್ಷೇಪ ವ್ಯಕ್ತಪಡಿಸಿರುತ್ತಾರೆಂದು ಹಾಗೂ ಕಾಮಗಾರಿ ಬಿಲ್ಲುಗಳಲ್ಲಿ ರಾಜಧನ ಕಟಾಯಿಸುವ ಮುನ್ನ ಕೆಲವು ಮಾರ್ಗಸೂಚಿಗಳಂತೆ ಕ್ರಮಕೈಗೊಳ್ಳಲು ಉಲ್ಲೇಖ (2) ರಲ್ಲಿನ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು "State of Orissa v/s Union of India AIR 2001 SC 410=(2001) 1 SCC 429 ರ ಆದೇಶದಲ್ಲಿ ಗಣಿಕಾರಿಕೆ ಅನುಮತಿ ಇಲ್ಲದ ಸಂದರ್ಭದಲ್ಲಿ ರೈಲ್ವೆ ಇಲಾಖೆಯು ರಾಜಧನ ಪಾವತಿಸುವ ಬಗ್ಗೆ, ತೀರ್ಪಿನ ಉದ್ಧೃತ ಭಾಗ ಈ ಕೆಳಕಂಡಂತಿರುತ್ತದೆಯೆಂದು ಉಲ್ಲೇಖ (3) ರ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

" Railways extracting certain minor minerals like rock-cut soils and earth and utilizing them in laying down the railway track are bound to pay royalty for the mineral extracted and used by it when there was no quarrying lease and a permit under the Rules" ಎಂದು ಇರುತ್ತದೆ.

ಈ ಸಂಬಂಧ, ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ರವರು ಉಲ್ಲೇಖ (3) ರಲ್ಲಿನ ಸುತ್ತೋಲೆಯಲ್ಲಿ 2016-17 ನೇ ಸಾಲಿನ ಮಹಾಲೇಖಪಾಲಕರ ಲೆಕ್ಕ ತಪಾಸಣಾ ವರದಿಯಲ್ಲಿ, ಮುರಂ ಮತ್ತು ಇತರೆ ಖನಿಜಗಳ ಆಂತರಿಕ (captive) ಬಳಕೆಯ ಮೇಲೆ ರಾಜಧನವನ್ನು ಕಡಿದುಕೊಳ್ಳದಿದ್ದು ಹಾಗೂ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಇಲಾಖೆಗಳು / ಸಂಸ್ಥೆಗಳು ರಾಜಧನವನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ವಿಳಂಬವಾಗಿ ಪಾವತಿಸುತ್ತಿದ್ದು, ಈ ಸಂಬಂಧವಾಗಿ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ.

ಆದ್ದರಿಂದ ರಾಜ್ಯದಲ್ಲಿ ಅನೇಕ ಜಿಲ್ಲೆಗಳಲ್ಲಿ ರೈಲ್ವೆ, ರಾಷ್ಟ್ರೀಯ, ರಾಜ್ಯ ಹೆದ್ದಾರಿ ಹಾಗೂ ಇತರೆ ರಸ್ತೆಗಳ ಕಾಮಗಾರಿ ಮತ್ತು ಇತರೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಿರ್ಮಾಣ ಪಥದಲ್ಲಿ (alignment of the road) ದೊರೆಯುವ ಖನಿಜಕ್ಕೆ ಸಂಬಂಧಪಟ್ಟ ಇಲಾಖೆಗಳು ಕಾಮಗಾರಿ ಗುತ್ತಿಗೆದಾರರಿಂದ ರಾಜಧನ ಸಂಗ್ರಹಿಸುವುದು ಮತ್ತು ಸಂಗ್ರಹಿಸಿರುವ ರಾಜಧನವನ್ನು ಕರ್ನಾಟಕ ಆರ್ಥಿಕ ಸಂಹಿತೆ 1958 ರ ಕಲಂ 4 (ಎ) ರನ್ವಯ ವಿಳಂಬವಿಲ್ಲದೆ, ಸದರಿ ಮೊತ್ತವನ್ನು 2 ದಿನಗಳೊಳಗಾಗಿ ರಾಜಸ್ವ ಲೆಕ್ಕ ಶೀರ್ಷಿಕೆ 0853 ರಲ್ಲಿ ಸಂಬಂಧಪಟ್ಟ ಖನಿಜಗಳ ಉಪಲೆಕ್ಕ ಶೀರ್ಷಿಕೆಗೆ ಜಮಾ ಮಾಡಲು ಉಲ್ಲೇಖ (3) ರ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಉಲ್ಲೇಖ (4) ರ ಸುತ್ತೋಲೆಯಲ್ಲಿ ದಿನಾಂಕ 30/06/2020 ರಿಂದ ಜಾರಿಗೆ ಬರುವಂತೆ ಕರ್ನಾಟಕ ಉಪ ಖನಿಜ ರಿಯಾಯಿತಿ ತಿದ್ದುಪಡಿ ನಿಯಮಾವಳಿಗಳು 2020 ರನ್ವಯ ಉಪಖನಿಜಗಳ ಮೇಲೆ ರಾಜಧನ ದರಗಳನ್ನು ಪರಿಷ್ಕರಿಸಲಾಗಿದೆ.

**ಆದೇಶ:**

ಈ ಹಿನ್ನೆಲೆಯಲ್ಲಿ, ಸರ್ಕಾರದ ಉಲ್ಲೇಖ (2), (3) ಮತ್ತು (4) ರಲ್ಲಿನ ಸುತ್ತೋಲೆಗಳನ್ನು ಕ್ರೋಡಿಕರಿಸಲಾಗಿದ್ದು, ಈ ಕೆಳಕಂಡ ಮಾರ್ಗಸೂಚಿಯಂತೆ, ನಿಗಮದಲ್ಲಿ ಕೈಗೊಳ್ಳುವ ಎಲ್ಲಾ ಕಾಮಗಾರಿಗಳಲ್ಲಿ ಉಪಯೋಗಿಸುವ ಉಪ ಖನಿಜಗಳಿಗೆ ರಾಜಧನ ಕಟಾಯಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

1. ನಿಗಮದಲ್ಲಿ ಕೈಗೊಳ್ಳುವ ಎಲ್ಲಾ ಕಾಮಗಾರಿಗಳ ಟೆಂಡರ್ ಗಳಲ್ಲಿ ಖನಿಜ ಬಳಕೆ ಸಂಬಂಧ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ, 1994 ರ ನಿಯಮ 36 ಹಾಗೂ ನಿಯಮ 42 ನ್ನು ಪಾಲಿಸುವ ಬಗ್ಗೆ ಸೂಕ್ತ ಷರತ್ತು ವಿಧಿಸುವುದು.

2. ಗುತ್ತಿಗೆದಾರರು (Contractors) ಕಲ್ಲುಗಣಿ ಗುತ್ತಿಗೆದಾರರಿಂದ ಪಡೆದ ಖನಿಜಕ್ಕೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಖನಿಜ ರವಾನೆ ಪರವಾನಿಗೆಯನ್ನು (MDP) ಕಡ್ಡಾಯವಾಗಿ ಪಡೆದು ಖನಿಜವನ್ನು ಸಾಗಾಣಿಕೆ ಮಾಡತಕ್ಕದ್ದು, ನಂತರ ಕಾಮಗಾರಿ ಬಿಲ್ಲುಗಳ ಜೊತೆಗೆ ರವಾನೆ ಪರವಾನಿಗೆಗಳನ್ನು ಲಗತ್ತಿಸಿ ರಾಜಧನ ಪಾವತಿಯಾಗಿರುವ ಬಗ್ಗೆ ನಿಗಮಕ್ಕೆ ದಾಖಲೆ ಮೂಲಕ ತಿಳಿಸಿದಲ್ಲಿ, ಅಂತಹ ಕಾಮಗಾರಿ ಬಿಲ್ಲುಗಳಲ್ಲಿ ರಾಜಧನವನ್ನು ಪುನಃ ಕಟಾಯಿಸುವಂತಿಲ್ಲ.

3. ರಾಜಧನ ಪಾವತಿಸಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುವಲ್ಲಿ, ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರು ವಿಫಲರಾದಲ್ಲಿ, ಅಂತಹ ಕಾಮಗಾರಿಗಳಿಗೆ ಬಳಸುವ ಉಪಖನಿಜಗಳಿಗೆ ಕರ್ನಾಟಕ ಉಪಖನಿಜ ರಿಯಾಯಿತಿ ತಿದ್ದುಪಡಿ ನಿಯಮಾವಳಿ 2016 ರ ನಿಯಮ 44 (3) ರಂತೆ ರಾಜಧನದ 5 ಪಟ್ಟು ದಂಡವನ್ನು ಲೆಕ್ಕ ಶೀರ್ಷಿಕೆ ಸಂಖ್ಯೆ 0853-102-1-05 ಗೆ ಹಾಗೂ ಶೇ 30% ಡಿಎಂಎಫ್ ಅನ್ನು ಸಂಗ್ರಹಿಸಿ ಆಯಾ ಜಿಲ್ಲೆಯ District Mineral Foundation (ಡಿಎಂಎಫ್) ಬ್ಯಾಂಕ್ ಖಾತೆಗೆ ಜಮೆ ಮಾಡತಕ್ಕದ್ದು.

4. ಪ್ರತಿ ವರ್ಷ ನಿಗಮದ ಕಾಮಗಾರಿಗಳಿಗೆ ವಿಭಾಗಾವಾರು ಅವಶ್ಯವಿರುವ ಉಪಖನಿಜಗಳ ಬೇಡಿಕೆಯನ್ನು ಲಗತ್ತಿಸಲಾಗಿರುವ ಅನುಬಂಧ- (1) ಮತ್ತು (2) ರಲ್ಲಿ, ಅಯಾ ಜಿಲ್ಲೆಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಸಲ್ಲಿಸುವುದು. ಇದರಿಂದ ನಿಗಮದ ಬೇಡಿಕೆಗೆ ಅನುಗುಣವಾಗಿ ಕಲ್ಲುಗಣಿ ನಿಕ್ಷೇಪಗಳ ಪ್ರದೇಶವನ್ನು ಮೀಸಲಿರಿಸಲು ಮತ್ತು ಈಗಾಗಲೇ ಮಂಜೂರಾಗಿರುವ ಕಲ್ಲುಗಣಿ ಗುತ್ತಿಗೆ ಪ್ರದೇಶಗಳಿಂದ ನಿಯಮಿತವಾಗಿ ಖನಿಜ ಪೂರೈಸುವ ಬಗ್ಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಕ್ರಮಕೈಗೊಳ್ಳಲು ಅನುಕೂಲವಾಗುವುದು.

5. ಕೆಎಂಎಂಸಿಆರ್ ತಿದ್ದುಪಡಿ ನಿಯಮ 3B & 3D (1) ಅಡಿಯಲ್ಲಿ ಸರ್ಕಾರಿ ಕಾಮಗಾರಿಗಳಿಗೆ ವಿಶೇಷ ಆದ್ಯತೆಯನ್ನು ನೀಡಿ ಕಲ್ಲುಗಣಿ ಗುತ್ತಿಗೆಯನ್ನು ಮಂಜೂರು ಮಾಡಲು ಅವಕಾಶವಿರುತ್ತದೆ. ಆದ್ದರಿಂದ ನಿಗಮದ ಕಾಮಗಾರಿಗಳಿಗೆ ಬಳಸುವ ಖನಿಜವು ಸುತ್ತಮುತ್ತಲ ಪ್ರದೇಶಗಳಲ್ಲಿ ಕಂಡು ಬಂದಲ್ಲಿ ಅದನ್ನು ಗುರುತಿಸಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಗಮನಕ್ಕೆ ತಂದು ಅರ್ಜಿ ಹಾಕಿ ಅದನ್ನು ಸಹ ಆದ್ಯತೆ ಮೇರೆಗೆ ಪರಿಗಣಿಸುವಂತೆ ಅನುಸರಣೆ ಮಾಡುವುದು.

6. ಉಲ್ಲೇಖ (1) ರ ನಿಗಮದ ಸುತ್ತೋಲೆಯಲ್ಲಿ ಈಗಾಗಲೆ ದಿನಾಂಕ 01/03/2014 ರಿಂದ ಜಾರಿಗೆ ಬರುವಂತೆ ಕಾಮಗಾರಿಗಳಿಗೆ ಬಳಸುವ ಉಪಖನಿಜಗಳ ಮೇಲಿನ ರಾಜಧನ ಹಾಗೂ ಮೆಟ್ರಿಕ್ ಟನ್‌ಗಳಿಂದ ಕ್ಯೂಬಿಕ್ ಮೀಟರ್‌ಗಳಿಗೆ ಪರಿವರ್ತಿಸುವ ಪರಿವರ್ತನ ಕೋಷ್ಟಕಗಳನ್ನು ಬಳಸಿ ರಾಜಧನವನ್ನು ಕಟಾಯಿಸಲು ಸೂಚಿಸಲಾಗಿದೆ.

7. ಉಲ್ಲೇಖ (4) ರ ಸರ್ಕಾರದ ಸುತ್ತೋಲೆಯಂತೆ ದಿನಾಂಕ 30/06/2020 ರಿಂದ ಜಾರಿಗೆ ಬರುವಂತೆ ಉಪಖನಿಜಗಳ ಮೇಲೆ ರಾಜಧನ ದರಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಲಾಗಿದ್ದು, ಸದರಿ ಪರಿಷ್ಕೃತ ದರದಂತೆ ರಾಜಧನವನ್ನು ಕಟಾಯಿಸುವಂತೆ ಸೂಚಿಸಲಾಗಿದೆ.

SE (IT & MIS)

ಪರಿಷ್ಕೃತ ರಾಜಧನ ದರ ಹಾಗೂ ಪರಿವರ್ತನ ಕೋಷ್ಟಕ

| ಕ್ರ ಸಂ | ಉಪ ಖನಿಜ | ರಾಜಧನ ಪ್ರತಿ ಮೆಟ್ರಿಕ್ ಟನ್ ಗೆ | ಪರಿವರ್ತನ ಕೋಷ್ಟಕ ಕ್ಯೂಬಿಕ್ ಮೀಟರ್ ನಂತೆ | ರಾಜಧನ ಪ್ರತಿ ಕ್ಯೂಬಿಕ್ ಮೀಟರ್ ಗೆ |
|---|---|---|---|---|
| 1 | ಕಟ್ಟಡ ಕಲ್ಲು | ರೂ.70 | 1 ಕ್ಯೂಬಿಕ್ ಮೀಟರ್‌ಗೆ =2.63 ಟನ್ | ರೂ.184/- |
| 2 | ಲ್ಯಾಟರೈಟ್ ಸ್ಟೋನ್ | ರೂ.60 | 1 ಕ್ಯೂಬಿಕ್ ಮೀಟರ್‌ಗೆ =1.80 ಟನ್ | ರೂ.108/- |
| 3 | ಜಲ್ಲಿ/ಮೆಟಲ್ ಎಲ್ಲಾ ವಿಧವಾದ (ಪುಡಿ ಗ್ರಾನೈಟ್/ಕ್ಯಾಜೈಟ್) | ರೂ.70 | 1 ಕ್ಯೂಬಿಕ್ ಮೀಟರ್‌ಗೆ =1.80 ಟನ್ | ರೂ.126/- |
| 4 | ಮರಳು | ರೂ.80 | 1 ಕ್ಯೂಬಿಕ್ ಮೀಟರ್‌ಗೆ =1.72 ಟನ್ | ರೂ.138/- |
| 5 | ಗ್ರಾವೆಲ್ (ಮುರಂ) | ರೂ.40 | 1 ಕ್ಯೂಬಿಕ್ ಮೀಟರ್‌ಗೆ =1.50 ಟನ್ | ರೂ.60/- |
| 6 | ಮಣ್ಣು (ಎಲ್ಲಾ ತರಹದ ಹೆಂಚು ಮತ್ತು ಇಟ್ಟಿಗೆ ತಯಾರಿಕೆಗಾಗಿ) | ರೂ.60 | 1 ಕ್ಯೂಬಿಕ್ ಮೀಟರ್‌ಗೆ =1.50 ಟನ್ | ರೂ.90/- |

8. ನಿಗಮದ ಪ್ರಸರಣ ಮಾರ್ಗ ನಿರ್ಮಾಣ ಪಥದಲ್ಲಿ (alignment of the line) ಮತ್ತು ಇತರೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ನಿರ್ಮಾಣ ಪಥದಲ್ಲಿ ದೊರೆಯುವ ಖನಿಜಕ್ಕೆ ಕಾಮಗಾರಿ ಗುತ್ತಿಗೆದಾರರಿಂದ ರಾಜಧನ ಸಂಗ್ರಹಿಸುವುದು ಮತ್ತು ಸಂಗ್ರಹಿಸಿರುವ ರಾಜಧನವನ್ನು ಕರ್ನಾಟಕ ಆರ್ಥಿಕ ಸಂಹಿತೆ 1958 ರ ಕಲಂ 4 (ಎ) ರನ್ವಯ ವಿಳಂಬವಿಲ್ಲದೆ ಸದರಿ ಮೊತ್ತವನ್ನು 2 ದಿನಗಳೊಳಗಾಗಿ ರಾಜಸ್ವ ಲೆಕ್ಕ ಶೀರ್ಷಿಕೆ 0853 ಯಲ್ಲಿ ಸಂಬಂಧಪಟ್ಟ ಖನಿಜಗಳ ಉಪಲೆಕ್ಕ ಶೀರ್ಷಿಕೆಗೆ ಜಮೆ ಮಾಡುವುದು.

ಮೇಲೆ ತಿಳಿಸಿರುವ ಮಾರ್ಗಸೂಚಿಗಳನ್ವಯ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

4/9/2020

ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:-**

1. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
3. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಕಾವೇರಿ ಭವನ ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಿದೆ.
4. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ) / (ಸಿವಿಲ್), ಕವಿಪ್ರನಿನಿ.
6. ಎಲ್ಲಾ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) / (ಸಿವಿಲ್)/ ಕವಿಪ್ರನಿನಿ.
8. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
9. ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆ ಮತ್ತು ಮಾಸಂ) ರವರ ಹಿರಿಯ ಆಪ್ತಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) / (ಸಿವಿಲ್), ಕವಿಪ್ರನಿನಿ.
11. ಎಲ್ಲಾ ಲೆಕ್ಕಾಧಿಕಾರಿಗಳು, ಕವಿಪ್ರನಿನಿ.